## ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕರ ಕಾರ್ಯಾಲಯ ಯಾದಗಿರಿ

ಸಂಖ್ಯೆ: ಶಿ: ಶಿವ: ಖಾಪ್ರಾಶಾಅನು : 11 : 2007-08 607 ದಿನಾಂಕ:18-06-2008

### ನಮೂನೆ-02

(ನಿಯಮ 3 ಉಪನಿಯಮ 5(ಬ)

ಪ್ರಮಾಣ ಪತ್ರ ಸಂಖ್ಯೆ : 11 : 2008-09

ಶ್ರೀ ಕೊತ್ತಲ ಬಸವೇಶ್ವರ ಭಾರತೀಯ ಶಿಕ್ಷಣ ಸಂಸ್ಥೆ ಸೇಡಂ ತಾ: ಸೇಡಂ ಇವರ ಗವರ್ನಿಂಗ್ ಕೌನ್ಸಿಲ್‌ನ್ನು ಕರ್ನಾಟಕ ಶಿಕ್ಷಣ ಕಾಯ್ದೆ 1983 (ಕರ್ನಾಟಕ ಎಜ್ಯುಕೇಶನ್ ಆಕ್ಟ-1995) ಸೆಕ್ಷನ್ -31 ರಂತೆ ಈ ದಿನ ದಿನಾಂಕ: 18-06-2008 ರಂದು ಈ ಕೆಳಗೆ ನಮೂದಿಸಿದ ಶಿಕ್ಷಣ ಸಂಸ್ಥೆಯನ್ನು ನಡೆಸಲು ನೊಂದಯಿಸಲಾಗಿದೆ ಎಂದು ಪ್ರಮಾಣೀಕರಿಸಲಾಗುತ್ತಿದೆ.

| | | |
|---|---|---|
| 01 | ಕ್ರಮ ಸಂಖ್ಯೆ | 11/2008-09 |
| 02 | ಪ್ರಾಥಮಿಕ ಶಾಲೆಯ ಹೆಸರು | ವಿದ್ಯಾ ಮಂದಿರ ಹಿರಿಯ ಪ್ರಾಥಮಿಕ ಶಾಲೆ, ಸೇಡಂ ತಾ: ಸೇಡಂ |
| 03 | ಅನುಮತಿ ನೀಡಿದ ತರಗತಿ | 01 ರಿಂದ 05 ನೇ ತರಗತಿ |
| 04 | ಪ್ರಾರಂಭಿಸಬೇಕಾದ ತರಗತಿ | 2008-09 ನೇ ಸಾಲಿಗೆ 01, 2009-10 ನೇ ಸಾಲಿಗೆ 02, 2010-11 ನೇ ಸಾಲಿಗೆ 03, 2011-12 ನೇ ಸಾಲಿಗೆ 04, 2012-13 ನೇ ಸಾಲಿಗೆ 05 ನೇ ತರಗತಿ. |
| 05 | ಶೈಕ್ಷಣಿಕ ವರ್ಷ | 2008-09 ನೇ ಸಾಲಿಗೆ 01, 2009-10 ನೇ ಸಾಲಿಗೆ 02, 2010-11 ನೇ ಸಾಲಿಗೆ 03, 2011-12 ನೇ ಸಾಲಿಗೆ 04, 2012-13 ನೇ ಸಾಲಿಗೆ 05 ನೇ ತರಗತಿ |
| 06 | ಅನುಮತಿ ನೀಡಿದ ಮಾಧ್ಯಮ | ಕನ್ನಡ ಮಾಧ್ಯಮ(ಶಾಶ್ವತ ಅನುದಾನ ರಹಿತ) |
| 07 | ಪಾವತಿ ಮಾಡಿರುವ ನೊಂದಣಿ ಶುಲ್ಕದ ವಿವರ | ರೂ 5000-00 ಸಂಖ್ಯೆ: 689962 ದಿ: 31-10-2007 |

ಸದರಿ ಶಿಕ್ಷಣ ಸಂಸ್ಥೆಯನ್ನು ಕ್ರಮ ಸಂಖ್ಯೆ :11 :ಪುಟ ಸಂಖ್ಯೆ: 11 ವ್ಯಾಲ್ಯೂಂ ಸಂಖ್ಯೆ: 01 ರ ಈ ಕಛೇರಿಯಲ್ಲಿನ ಶೈಕ್ಷಣಿಕ ಸಂಸ್ಥೆಗಳ ನೊಂದಣಿ ವಹಿಯಲ್ಲಿ ನೊಂದಯಿಸಲಾಗಿದೆ.

ಈ ಪ್ರಮಾಣ ಪತ್ರವನ್ನು ಈ ಕೆಳಕಂಡ ಷರತ್ತುಗೊಳಪಟ್ಟು ನೀಡಲಾಗಿದೆ.

1) ನೊಂದಣಿಯು ನಿಯಮ 3(5)(4) ಕ್ಕೆ ಒಳಪಟ್ಟಿರುತ್ತದೆ.
2) ಗವರ್ನಿಂಗ್ ಕೌನ್ಸಿಲ್ ರವರ ನಿಯಮ 4(4) ತಿಳಿಸಿರುವ ಎಲ್ಲಾ ಷರತ್ತುಗಳನ್ನು ಕಡ್ಡಾಯವಾಗಿ ಪಾಲಿಸಬೇಕು.
3) ಶಾಲಾ ನಿವೇಶನ ವಿಸ್ತೀರ್ಣ, ಕಟ್ಟಡ, ಪಾಠ, ಪೀಠೋಪಕರಣ, ಸಿಬ್ಬಂದಿ ವರ್ಗ, ಆರ್ಥಿಕ ಅನುಕೂಲತೆಗಳು ಮುಂತಾದವುಗಳನ್ನು ಒದಗಿಸುವ ಷರತ್ತುಗೊಳಪಟ್ಟಿರುತ್ತದೆ.
4) ಸದರಿ ಶಿಕ್ಷಣ ಸಂಸ್ಥೆಯು ಯಾವುದೇ ಸಂದರ್ಭದಲ್ಲಿಯು ಇಲಾಖಾ ಪೂರ್ವಾನುಮತಿಯಿಲ್ಲದೆ ಹೆಚ್ಚಿನ ತರಗತಿಗಳನ್ನು ಹಾಗು ವಿಭಾಗಗಳನ್ನು ತೆರೆಯುವಂತಿಲ್ಲ
5) ಮಂಜುರುಮಾಡಿದ ಮಾಧ್ಯಮದಲ್ಲಿ ಮತ್ತು ಅದೇ ಸ್ಥಳದಲ್ಲಿ ಮಾತ್ರ ಶಾಲೆಯನ್ನು ನಡೆಸತಕ್ಕದ್ದು ಹಾಗು ಯಾವುದೇ ಕಾರಣಕ್ಕು ಸ್ಥಳ ಬದಲಾವಣೆ ಮಾಡಲು ಅವಕಾಶ ವಿರುವದಿಲ್ಲ ಮತ್ತು ಅದೇ ಹೆಸರಿನಲ್ಲಿ ನಡೆಸತಕ್ಕದ್ದು.
6) ಈ ಶಿಕ್ಷಣ ಸಂಸ್ಥೆಯವರು ಶಿಕ್ಷಣ ಸಂಸ್ಥೆಗಳಿಗೆ ಸಂಬಂಧಿಸಿದಂತೆ ಜಾರಿಯಲ್ಲಿರುವ ಹಾಗು ಆಗಿಂದಾಗ್ಗೆ ಹೊರಡಿಸುವ ಎಲ್ಲಾ ಸರಕಾರಿ ಆದೇಶಗಳು ಹಾಗು ನಿಯಮಗಳನ್ನು ಪಾಲಿಸತಕ್ಕದ್ದು.
7) ಈ ಪ್ರಾಥಮಿಕ ಶಾಲಾ ನೋಂದಣಿಯು ಸರಕಾರಿ ಅಧಿಸೂಚನೆ ಸಂಖ್ಯೆ:ಇಡಿ:175:ಪಿಎಂಪಿ:95 ಬೆಂಗಳೂರು ದಿನಾಂಕ: 07-09-1998 ಮತ್ತು 29-12-1998 ರ ಪ್ರಕಾರ ಶಾಶ್ವತ ಅನುದಾನರಹಿತವಾಗಿರುತ್ತದೆ.ಆಡಳಿತ ಮಂಡಳಿಯವರು ಸರಕಾರದಿಂದ ಯಾವುದೇ ಧನ ಸಹಾಯವನ್ನು ಕೋರುವದಿಲ್ಲವೆಂದು ರೂ 20-00 ರ ಛಾಪಾ ಕಾಗದದಲ್ಲಿ ನೋಟರಿಯವರ ಮುಂದೆ ಪ್ರಮಾಣೀಕರಿಸಿದ ಒಪ್ಪಿಗೆ ಪತ್ರವನ್ನು ನೀಡುವದು.
8) ಕರ್ನಾಟಕ ಖಾಸಗಿ ಶಿಕ್ಷಣ ಸಂಸ್ಥೆಗಳ ನೌಕರರ ನೇಮಕಾತಿ,ಸೇವಾ ಮತ್ತು ನಿಬಂಧನೆಗಳು ನಿಯಮ 1999 ರ ನಿಯಮಗಳನ್ನು ತಪ್ಪದೇ ಪಾಲಿಸತಕ್ಕದ್ದು.
9) ಇಲಾಖೆ ಹಾಗು ಸರಕಾರಿ ನಿಗಧಿಪಡಿಸಿದ ಪಠ್ಯ ಪುಸ್ತಕ,ಪರೀಕ್ಷಾ ಕ್ರಮಗಳನ್ನು ತಪ್ಪದೇ ಅಳವಡಿಸತಕ್ಕದ್ದು.
10) ಅನುಮತಿ ನೀಡಿದ ಪ್ರತಿಯೊಂದು ತರಗತಿಯಲ್ಲಿ ಮಕ್ಕಳ ಹಾಗು ಶಿಕ್ಷಕರ ಅನುಪಾತವು ನಿಯಮಾನುಸಾರ ಇರತಕ್ಕದ್ದು. ಪ್ರತಿ ತರಗತಿಯಲ್ಲಿ ಗರಿಷ್ಠ ದಾಖಲಾತಿ 50 ಮತ್ತು ಹಾಜರಾತಿ ಕನಿಷ್ಠ 40 ಇರತಕ್ಕದ್ದು.
11) ತರಬೇತಿ ಹೊಂದಿದ ಹಾಗು ಇಲಾಖೆಯ ನಿಯಮಗಳ ಪ್ರಕಾರ ವಿದ್ಯಾರ್ಹತೆ ಹೊಂದಿದ ಶಿಕ್ಷಕರನ್ನು ಮಾತ್ರ ನೇಮಿಸತಕ್ಕದ್ದು.
12) ಕರ್ನಾಟಕ ಶಿಕ್ಷಣ ಸಂಹಿತೆ ಅನುಚ್ಛೇದ 8 ರ ಅಡಿಯಲ್ಲಿ ಉಪಬಂದ 36-39 ರಂತೆ ನೋಂದಯಿಸಿದ ಎಲ್ಲಾ ಶಾಲೆಗಳು ರಿಕಾಗ್ನೇಷನ್ ಹಾಗು ಪ್ರಾವಿಷನಲ್ ರಿಕಾಗ್ನಿಶನ್ ವ್ಯಾಪ್ತಿಗೆ ಒಳಪಡುತ್ತದೆ. ಪ್ರಾರಂಭಿಸಿದ 3 ತಿಂಗಳನೊಳಗೆ ಪ್ರಥಮ ಮಾನ್ಯತೆ ಪಡೆಯುವದು ಕಡ್ಡಾಯವಾಗಿರುತ್ತದೆ.-
13) ಶಾಲೆಯನ್ನು ಪ್ರಾರಂಭಿಸಲು ಸಂಸ್ಥೆಯ ಭದ್ರತಾ ಠೇವಣಿಯನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗು ಆಡಳಿತ ಮಂಡಳಿಯ ಜಂಟಿ ಖಾತೆಯಲ್ಲಿ ಇರಿಸತಕ್ಕದ್ದು.
14) ಕರ್ನಾಟಕ ಶಿಕ್ಷಣ ಸಂಹಿತೆ ನಿಯಮಗಳ ಪ್ರಕಾರ ಶಾಲೆಗೆ ಬೇಕಾದ ಪೀಠೋಪಕರಣ,ಪಾಠೋಪಕರಣ,ಗ್ರಂಥಾಲಯ ಪುಸ್ತಕಗಳು,ಆಟದ ಮೈದಾನ,ಶಾಲಾ ಕಟ್ಟಡ ಮುಂತಾದ ಸೌಲಭ್ಯಗಳನ್ನು ಒಂದು ವರ್ಷದಲ್ಲಿ ಒದಗಿಸಿಕೊಳ್ಳತಕ್ಕದ್ದು.
15) ಶಾಲಾ ಕೆಲಸದ ವೇಳೆ ಮತ್ತು ದಿನಗಳನ್ನು ಇಲಾಖೆಯ ನಿಯಮಗಳಂತೆ ಪಾಲಿಸತಕ್ಕದ್ದು.
16) ಶಾಲೆಯಲ್ಲಿ ಹೆಣ್ಣು ಮತ್ತು ಗಂಡು ಮಕ್ಕಳಿಗೆ ಪ್ರತ್ಯೇಕವಾಗಿ ಶೌಚಾಲಯ ವ್ಯವಸ್ಥೆಯನ್ನು ಮತ್ತು ಕುಡಿಯುವ ನೀರಿನ ವ್ಯವಸ್ಥೆಯನ್ನು ಕಡ್ಡಾಯವಾಗಿ ಒದಗಿಸಬೇಕು.
17) ಅನುಮತಿ ನೀಡಿದ ತರಗತಿಯನ್ನು ಆಯಾಯ ವರ್ಷದಲ್ಲಿ ಪ್ರಾರಂಭಿಸುವದು.
18) ಶಾಲೆಯಲ್ಲಿ ನೇಮಕ ಮಾಡಿಕೊಳ್ಳುವ ಪ್ರತಿಯೊಬ್ಬ ಬೋಧಕ :ಬೋಧಕೇತರ ಸಿಬ್ಬಂದಿಗಳು ಕರ್ನಾಟಕ ನಾಗರೀಕಾ ಸೇವಾ ನಿಯಮದ ಪ್ರಕಾರ ಸೇವಾ ಪುಸ್ತಕ ತೆರೆದು ಅದರಲ್ಲಿ ಸೇವಾ ವಿವರಗಳನ್ನು ನಿಯಮಾನುಸಾರ ದಾಖಲಿಸಿ ನಿರ್ವಹಿಸುವದು. ಹಾಗು ವೇತನವನ್ನು ಎ/ಸಿ ಪೇ ಮುಖಾಂತರ ನೀಡುವದು
19) ಶಾಲೆಯಲ್ಲಿ ಸಮವಸ್ತ್ರ,, ಪಠ್ಯ ಪುಸ್ತಕ,ನೋಟ್ ಬುಕ್ ಇತ್ಯಾಧಿಗಳನ್ನು ಮಾರಾಟ ಮಾಡಕೂಡದು

ಮೇಲ್ಕಾಣಿಸಿದ ಷರತ್ತುಗಳನ್ನು ಕಡ್ಡಾಯವಾಗಿ ಪಾಲಿಸುವ ಷರತ್ತುಗೊಳಪಟ್ಟು ಈ ನೊಂದಣಿಯನ್ನ ನೀಡಿದೆ.

(ಪರಮೇಶ ಜಿ.ಎನ್)
ಉಪನಿರ್ದೇಶಕರು
ಸಾರ್ವಜನಿಕ ಶಿಕ್ಷಣ ಇಲಾಖೆ, ಯಾದಗಿರಿ

ಗೆ,
ಅಧ್ಯಕ್ಷರು:ಕಾರ್ಯದರ್ಶಿಗಳು
ಶ್ರೀ ಕೊತ್ತಲ ಬಸವೇಶ್ವರ ಭಾರತೀಯ ಶಿಕ್ಷಣ ಸಂಸ್ಥೆ ಸೇಡಂ ತಾ: ಸೇಡಂ

ಪ್ರತಿಯನ್ನು:-

1) ಮಾನ್ಯ ನಿರ್ದೇಶಕರು,ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲಬರ್ಗಾ ರವರಿಗೆ ಗೌರವಪೂರ್ವಕವಾಗಿ ಸಲ್ಲಿಸಿದೆ.
2) ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸೇಡಂ ತಾ: ಸೇಡಂ

28/04/2020

PRINCIPAL